**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

# ಸಿ.ಸಿ. ಸಂಖ್ಯೆ: 305/2018

ಫಿರ್ಯಾದಿದಾರರುಃ ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು ಃ ಎ 1. **ಮುಷ್ತಾಕ್ ಅಹಮದ್**
ಬಿನ್ ಅಬ್ದುಲ್ ಸಮದ್
ಸುಮಾರು 42 ವರ್ಷ ವಯಸ್ಸು,
ವಾಸಃ ಮನೆ ಸಂಃ 401/67/1E ವಿ.ಪಿ. ಬೋರೆ
ಹುಣಸೂರು ಟೌನ್,
ಮೈಸೂರು ಜಿಲ್ಲೆ

ಎ 2. **ಮೊಹಮದ್ ನಾಸಿರ್**
ಬಿನ್ ಲೇಟ್ ಮೊಹಮದ್ ಮುನೀರ್
ಸುಮಾರು 23 ವರ್ಷ ವಯಸ್ಸು,
ವಾಸಃ ಮುಸ್ಲಿಂ ಬ್ಲಾಕ್, ಹೆಚ್.ಡಿ. ಕೋಟೆ ಟೌನ್.

ಹಾಲಿ ವಾಸಃ ಶಬ್ಬೀರ್ ನಗರ,
ರಜಾಕ್ ಮೊಹಲ್ಲಾ,
ಹುಣಸೂರು.

## ಆಪಾದನೆ

ಶ್ರೀ ಮನು ಪಟೇಲ್ ಬಿ.ವೈ., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

1. ದಿಃ 03.11.2017 ರಂದು ಸಂಜೆ 19.15 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಕೆಂಚನಕೆರೆ ಹೊಸಕೋಟೆ ಗ್ರಾಮದ ಗೇಟ್ ಬಳಿ ಸಾಕ್ಷಿ 2 ಅವರು ಕೆಎ–45–ಎಕ್ಸ್–5141 ನಂಬರಿನ ಟಿವಿಎಸ್ ವಿಕ್ಟರ್ ಮೋಟಾರ್ ಬೈಕ್ ನಲ್ಲಿ ಸಾಕ್ಷಿ

3 ಅವರನ್ನು ಕೂರಿಸಿಕೊಂಡು ಹುಣಸೂರು ಕಡೆಯಿಂದ ಪಡುವಕೋಟೆ ಹಾಡಿ ಕಡೆಗೆ ಹೊಸಕೋಟೆ ಗೇಟ್ ಬಳಿ ಹೋಗುತ್ತಿದ್ದಾಗ ಎದುರುಗಡೆಯಿಂದ ಅಂದರೆ ರತ್ನಪುರಿ ಗ್ರಾಮದ ಕಡೆಯಿಂದ 1 ನೇ ಆರೋಪಿಯಾದ ನೀವು ಕೆಎ-12-7705 ನಂಬರಿನ ಪಿಜಿಯೋ ಗೂಡ್ಸ್ ವಾಹನವನ್ನು ಅತಿವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ-2 ರವರು ಓಡಿಸುತ್ತಿದ್ದ ಮೋಟಾರ್ ಬೈಕಿಗೆ ಡಿಕ್ಕಿ ಮಾಡಿ ಅಪಘಾತಪಡಿಸಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ಬೈಕನ್ನು ಡಿಕ್ಕಿಪಡಿಸಿದ ಪರಿಣಾಮ ಸಾಕ್ಷಿ -2 ಮತ್ತು 3 ರವರುಗಳು ಬೈಕ್ ಸಮೇತರಾಗಿ ಕೆಳಗಡೆ ಬಿದ್ದು ಸಾಕ್ಷಿ-2 ರವರ ಬಲ ತೊಡೆಯ ಬಳಿ , ಬಲ ಮೊಣ ಕಾಲಿನ ಬಳಿ ಹಾಗೂ ಬಲಕೈನ ಬಳಿ ಮೂಳೆ ಮುರಿದು ಹೋಗಿ ತೀವ್ರ ಸ್ವರೂಪದ ಗಾಯವನ್ನುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 338 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3. ಮೂರನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, 1 ನೇ ಆರೋಪಿಯಾದ ನೀವು ನಿಮ್ಮ ಬಳಿ ಗೂಡ್ಸ ವಾಹನವನ್ನು ಚಾಲನೆ ಮಾಡಲು ಯಾವುದೇ ಪರವಾನಿಗೆ ಇಲ್ಲದಿದ್ದರು ಸಹ ಗೂಡ್ಸ ವಾಹನವನ್ನು ಚಾಲನೆ ಮಾಡಿರುತ್ತೀರೆಂದು, ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 3 ರ ಸಹವಾಚಕ ಕಲಂ 181 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

4. ನಾಲ್ಕನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, ನಿಮ್ಮ ಬಾಬ್ತು ಕೆಎ-12-7705 ನಂಬರಿನ ಪಿಜಿಯೋ ಗೂಡ್ಸ್ ವಾಹನದ ಮಾಲೀಕರಾಗಿದ್ದು ಸದರಿ ವಾಹನಕ್ಕೆ ಯಾವುದೇ ವಿಮೆ ಇಲ್ಲದೇ ಇದ್ದರೂ **1** ನೇ ಆರೋಪಿಗೆ ಚಾಲನೆ ಮಾಡಲು ನೀಡಿ ಅಪಘಾತ ಪಡಿಸಿರುತ್ತೀರೆಂದು**,** ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ **146** ರ

ಸಹವಾಚಕ ಕಲಂ 196 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

5. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ, 1 ನೇ ಆರೋಪಿಯು ಮಾನ್ಯವಾದ ಪರವಾನಗಿಯನ್ನು ಹೊಂದಿರದಿದ್ದರೂ ನಿಮ್ಮ ಬಾಬ್ತು ಕೆಎ-12-7705 ನಂಬರಿನ ಪಿಜಿಯೋ ಗೂಡ್ಸ್ ವಾಹನವನ್ನು 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತೀರೆಂದು, ಆ ಮೂಲಕ ಮೋಟಾರು ವಾಹನ ಕಾಯ್ದೆ ಕಲಂ 5 ರ ಸಹವಾಚಕ ಕಲಂ 180 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

(ಮನು ಪಟೇಲ್ ಬಿ.ವೈ.)
ದಿನಾಂಕಃ 15.12.2023
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.